**Crl.Misc No.**224/ 2023

**PW** :1

**ದಿನಾಂಕಃ 04-04-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರವಾಗಿಃ ಶ್ರೀ ಬಿ.ಜಿ.ಎಲ್. ವಕೀಲರಿಂದಃ**

6. ವೈವಾಹಿಕ ಜೀವನದ ಪುನರ್ಸ್ಥಾಪನೆ ಕೋರಿ ಎದುರುದಾರರು ಮೈಸೂರಿನ ಪ್ರಧಾನ ಕೌಂಟುಂಬಿಕ ನ್ಯಾಯಲಾಯದಲ್ಲಿ ಎಂ.ಸಿ.151/2024 ರಂತೆ ಸಲ್ಲಿಸಿದ ಅರ್ಜಿಯು ಎದುರುದಾರರ ಪರ ಆದೇಶವಾಗಿರುತ್ತದೆ ಎಂದರೆ ಸರಿ. ಎಂ.ಸಿ.151/2024 ರಲ್ಲಿ ಆದ ಆದೇಶದ ಮತ್ತು ಡಿಕ್ರಿಯ ದೃಡೀಕೃತ ನಕಲನ್ನು ಸಾಕ್ಷಿಗೆ ತೋರಿಸಿದ್ದು, ಅದನ್ನು ನಿಆರ್.1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಎಂ.ಸಿ.151/2024 ರಲ್ಲಿ ತಮಗೆ ಜಾರಿಯಾದ ಸಮನ್ಸ್ ನ ದೃಡೀಕೃತ ನಕಲನ್ನು ತೋರಿಸಿದ್ದು, ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಅದನ್ನು ನಿಆರ್.3 ಎಂದು ಗುರುತಿಸಲಾಯಿತು. ನಿಆರ್.3 ರ ಸಮನ್ಸ್ ನೀವು ಕೆಲಸ ಮಾಡುತ್ತಿದ್ದ ವಿಳಾಸಕ್ಕೆ ಬಂದಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಆರ್.3 ರ ಸಮನ್ಸ್ ನನಗೆ ಬಂದ್ದಿದಾಗ ನಾನು ಕೆಲಸ ಮಾಡುತ್ತಿದ್ದು, ಈಗ ಅಲ್ಲಿ ನಾನು ಕೆಲಸ ಮಾಡುತ್ತಿಲ್ಲ ಎಂದು ಸ್ವತಃ ನುಡಿದಿರುತ್ತಾರೆ.

7. ನಾನು ಮೈಸೂರಿನ ಕ್ಲಿಯರ್ ಮೆಡಿ ರೆಡಿಯಂಟ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾಗ ನನಗೆ ತಿಂಗಳಿಗೆ 15,500/- ರೂಪಾಯಿ ಸಂಬಳ ಬರುತ್ತಿತ್ತು. ನನ್ನ ಸಂಬಳವು ವಿಜಯನಗರ 3rd stage ನಲ್ಲಿ ಇದ್ದ ನನ್ನ ಇಂಡಸ್ ಲ್ಯಾಂಡ್ ಬ್ಯಾಂಕಿನ ಖಾತೆಗೆ ಬರುತ್ತಿತ್ತು. ನನ್ನ ಸಂಬಳ ಜಮಾ ಆಗುತ್ತಿದ್ದ ಇಂಡಸ್ ಲ್ಯಾಂಡ್ ಬ್ಯಾಂಕಿನ ಖಾತೆಯ ಪಾಸ್ ಪುಸ್ತಕವನ್ನು ಅಥವಾ ಬ್ಯಾಂಕ್ ಸ್ಟೇಟ್ ಮೆಂಟ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾನು ಈಗಲೂ ಸಹ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ಲಿಯರ್ ಮೆಡಿ ರೆಡಿಯಂಟ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾಗ ನನಗೆ ಬರುತ್ತಿದ ವೇತನ ಪ್ರಮಾಣ ಪತ್ರವನ್ನು ಅಗತ್ಯವಿದ್ದಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ.

8. ಎದುರುದಾರ ನಾನು ಕೆಲಸ ಮಾಡುತ್ತಿದ್ದ ಆಸ್ಪತ್ರೆಗೆ ಬಂದು ಜಗಳ ಮಾಡಿದಾಗ ಮೈಸೂರಿನ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದ ಕಾರಣ ನಾನು ಎದುರುದಾರನ ಸದರಿ ವರ್ತನೆಯ ಬಗ್ಗೆ ಮೈಸೂರಿನ ನ್ಯಾಯಾಲಯದಲ್ಲಿ ದೂರನ್ನು ನೀಡಿದ್ದು, ಪೋಲಿಸ್ ಠಾಣೆಯಲ್ಲಿ

ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ಆಸ್ಪತ್ರೆಯಲ್ಲಿ ಗೈರು ಹಾಜರಿದ್ದಾಗ ನನ್ನ ಅನುಪಸ್ಥಿತಿಯಲ್ಲಿ ಎದುರುದಾರ ನಾನು ಕೆಲಸ ಮಾಡುತ್ತಿದ್ದ ಆಸ್ಪತ್ರೆಗೆ ಹೋಗಿ, ನಾನು ಬೇರಯವರೊಂದಿಗೆ ಓಡಿ ಹೋಗಿರುತ್ತೇನೆ ಎಂದು ಎದುರುದಾರ ಆಸ್ಪತ್ರೆಯ ಸಿಬ್ಬಂದಿಗಳೊಂದಿಗೆ ಸುಳ್ಳು ಅಪವಾದ ಮಾಡಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ. ಎದುರುದಾರ ನಾನು ಕೆಲಸ ಮಾಡುತ್ತಿದ್ದ ಆಸ್ಪತ್ರೆಗೆ ಹೋಗಿ ನನ್ನ ಬಗ್ಗೆ ಆಸ್ಪತ್ರೆಯ ಸಿಬ್ಬಂದಿಗಳೊಂದಿಗೆ ಸುಳ್ಳು ಅಪವಾದ ಮಾಡಿರುತ್ತಾರೆ ಎಂದು ಸಬೀತುಪಡಿಸಲು ನಾನು ಸದರಿ ಆಸ್ಪತ್ರೆಯ ಸಿಬ್ಬಂದಿಗಳನ್ನು ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿಸಬಲ್ಲೆ. ನಾನು ಹೇಳಿದ ಹಾಗೆ ಎದುರುದಾರ ನಾನು ಕೆಲಸ ಮಾಡುತ್ತಿದ್ದ ಆಸ್ಪತ್ರೆಗೆ ಬಂದು ಯಾವುದೇ ರೀತಿಯ ಜಗಳ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

9. ನಾನು ಈಗ ನನ್ನ ತವರುಮನೆಯಲ್ಲಿ ವಾಸವಿದ್ದೇನೆ. ನಾನು ನನ್ನ ತವರುಮನೆಯಲ್ಲಿ ವಾಸವಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮನಾದ ಗಿರೀಶ್ ಮೈಸೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ಎದುರುದಾರನೊಂದಿಗೆ ಬಾಳ್ವೆ ಮಾಡಲು ಆಸಕ್ತಳಿದ್ದು, ನನ್ನನ್ನು ಎದುರುದಾರ ತಮ್ಮ ಜೊತೆ ಕರೆದುಕೊಂಡು ಹೋಗಬೇಕು ಎಂದು ನಾನು ನಿಪಿ.1 ರ ನೋಟಿಸಿನಲ್ಲಿ ಹೇಳಿರುತ್ತೇನೆ ಎಂದರೆ ಸರಿ. ನಾನು ಕಳುಹಿಸಿದ ನಿಪಿ.1 ರ ನೋಟಿಸಿಗೆ ಎದುರುದಾರ ತಮ್ಮ ವಕೀಲರ ಮೂಲಕ ಪ್ರತ್ಯುತ್ತರ ನೋಟಿಸನ್ನು ಕಳುಹಿಸಿರುತ್ತಾರೆ ಎಂದರೆ ಸರಿ. ಎದುರುದಾರ ಕಳುಹಿಸಿರುವ ಪ್ರತ್ಯುತ್ತರ ನೋಟಿಸಿನ ದೃಢೀಕೃತ ನಕಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿ.ಆರ್–4 ಎಂದು ಗುರುತಿಸಲಾಯಿತು. ತಾವು ಸಹ ನನ್ನೊಂದಿಗೆ ಜೊತೆಯಾಗಿ ಬಾಳ್ವೆ ನಡೆಸಲು ಸದಾ ಸಿದ್ಧರಿದ್ದಾರೆ ಎಂದು ಎದರುದಾರ ನಿಆರ್–4 ರ ನೋಟಿಸಿನಲ್ಲಿ ಹೇಳಿರುತ್ತಾರೆ ಎಂದರೆ ಸರಿ.

10. ಎದುರುದಾರನ ತಾಯಿಯ ಹೆಸರಿನಲ್ಲಿ ಒಂದು ನಿವೇಶನ ಮತ್ತು ಒಂದು ಮನೆ ಇರುವ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಎದುರುದಾರನ ತಾಯಿಗೆ ಮದುಮೇಹ, ರಕ್ತದ ಒತ್ತಡದ ಕಾಯಿಲೆಯಿಂದ ಬಳಲುತ್ತಿದ್ದಾರೆ ಎಂದರೆ ಸರಿಯಲ್ಲ. ತಮ್ಮ ತಂದೆ-ತಾಯಿಯನ್ನು ನೋಡಿಕೊಳ್ಳುವ ಸಂಪೂರ್ಣ ಜವಾಬ್ದಾರಿ ಎದುರುದಾರನ ಮೇಲೆ ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಮೊದಲು ಹೌದು ಎಂದು ಉತ್ತರಿಸಿದ್ದು, ನಂತರದಲ್ಲಿ ಈಗ 4-5 ವರ್ಷಗಳ ಹಿಂದೆ ಎದುರುದಾರ ಹಾಗೂ ಅವರ ತಂದೆ ಹಾಗೂ ತಾಯಿ ಎಲ್ಲರೂ

ಕೆಲಸ ಮಾಡುತ್ತಿದ್ದು, ಈಗ ಎದುರುದಾರನ ತಂದೆ-ತಾಯಿ ಕೆಲಸ ಮಾಡುತ್ತಾರೋ ಇಲ್ಲವೋ ಎಂದು ನುಡಿದಿರುತ್ತಾರೆ. ಎದುರುದಾರನ ತಂದೆ-ತಾಯಿಗೆ ವಯಸ್ಸಾಗಿರುವ ಕಾರಣ ಅವರು ಈಗ ಯಾವುದೇ ಕೆಲಸ ಮಾಡುತ್ತಿಲ್ಲ ಬದಲಾಗಿ ಎದುರುದಾರನೇ ತಮ್ಮ ತಂದೆ ಮತ್ತು ತಾಯಿಯನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

11. ನಿಪಿ.5 ರ ಆಸ್ತಿಯು ಎದುರುದಾರನ ತಂದೆ ಹೆಸರಿನಲ್ಲಿದೆ. ಎದುರುದಾರನ ತಂದೆಯ ಹೆಸರಿಗೆ 1 ಎಕರೆ ಜಮೀನು ಇದೆ. ಸದರಿ ಮಾತು ಸುಳ್ಳು ಎಂದರೆ ಸರಿಯಲ್ಲ. ನಾನು ಎದುರುದಾರನ ಮನೆ ಬಿಟ್ಟು ಬಂದಾಗ ನನ್ನ ಹೆಂಡತಿ ಮನೆ ಬಿಟ್ಟು ಹೋಗಿದ್ದಾಳೆ ಎಂದು ಎದುರುದಾರ ವಿಜಯನಗರ ಪೋಲಿಸ್ ಠಾಣೆಯಲ್ಲಿ ದೂರನ್ನುನೀಡಿದ್ದರು ಎಂದರೆ ಸಾಕ್ಷಿಯು ನಾನು ಈ ಅರ್ಜಿಯನ್ನು ಸಲ್ಲಿಸಿದ ನಂತರದಲ್ಲಿ ಎದುರುದಾರ ಸದರಿ ದೂರನ್ನು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಎದುರುದಾರ ಕೊಟ್ಟ ದೂರಿನ ಆಧಾರದ ಮೇರೆಗೆ ಪೋಲಿಸರು ನನ್ನನ್ನು ಮತ್ತು ಎದುರುದಾರರನ್ನು ಪೋಲಿಸ್ ಠಾಣೆಗೆ ಕರೆಯಿಸಿ ರಾಜಿ ಸಂದಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರ ಕೂಲಿ ಕೆಲಸ ಮಾಡುತ್ತಾನೆ ಎಂದರೆ ಸರಿಯಲ್ಲ.

**ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**